

ಪ್ರಕೃತಿಯ ನಡುವೆ ಪ್ರಕೃತಿಯೇ ಆಗಿ ಬದುಕುವ ಮೆಂಟವಯ್

## ತಂಬಾಕು ದಾಸರು

ಮೆಂಟವಯ್ ಜನರು ತಂಬಾಕು ದಾಸರು. ಗಂಡಸರು ಹೆಂಗಸರು ಭೇದವಿಲ್ಲದೆ ಒಣಗಿದ ತಾಳೆ ಎಲೆಯಲ್ಲಿ ತಂಬಾಕನ್ನು ತುಂಬಿಕೊಂಡು ಸುರುಳಿ ಸುತ್ತಿ ಬೀಡಿಯಂತೆ ಸೇದುತ್ತಿರುತ್ತಾರೆ.

ಆಧುನಿಕತೆ ಅವರಿಗೆ ಅದಕ್ಕೆ ಬೆಂಕಿ ಹೊತ್ತಿಸಲು ಲೈಟರನ್ನು ಒದಗಿಸಿದೆ! ಪ್ರವಾಸಿಗರು ತೆಗೆದುಕೊಂಡು ಹೋಗುವ ಟೀ ಅವರಿಗೆ ಬಹಳ ಇಷ್ಟ. ಎರಡೆರಡು ಚಮಚ ಸಕ್ಕರೆಯನ್ನು ಬಿಸಿ ನೀರಿಗೆ ಹಾಕಿಕೊಂಡು ಟೀ ಬ್ಯಾಗ್ ಅದರಲ್ಲಿ ಮುಳುಗಿಸಿ, ತಂಬಾಕು ಸೇದುತ್ತಾ ಟೀ ಕುಡಿಯುತ್ತಾರೆ.

ತೆಗೆದುಕೊಂಡು ಹೋಗಿದ್ದೆವು. ಉಮಾವನ್ನು ಅವರು ಬೇಟೆಯಾಡಿದ ವಿವಿಧ ಪ್ರಾಣಿಗಳ ತಲೆಬುರುಡೆಗಳಿಂದ ಅಲಂಕರಿಸಲಾಗಿತ್ತು.

## ಪ್ರಕೃತಿಯೇ ದೈವ

ಮೆಂಟವಯ್ ಬುಡಕಟ್ಟು ಜನಾಂಗದವರು ಉತ್ತರ ದಿಕ್ಕಿನಲ್ಲಿರುವ ನಿಯಾಸ್ ದ್ವೀಪದ ಕಡೆಯಿಂದ ಮೆಂಟವಯ್ ದ್ವೀಪಗಳಿಗೆ ವಲಸೆ ಬಂದಿದ್ದಾರೆಂದು ದಾಖಲಿಸಲಾಗಿದೆ. 1621ರಲ್ಲಿ ಡಚ್ಚರು ಅವರ ಬಗ್ಗೆ ತಿಳಿಸುವವರೆಗೂ ಹೊರ ಪ್ರಪಂಚದಿಂದ ಅಜ್ಞಾತರಾಗಿಯೇ ಇದ್ದರು.

ಅವರಿಗೆ ಪ್ರಕೃತಿಯೇ ದೈವ. ಪ್ರಕೃತಿಯಲ್ಲಿನ ಎಲ್ಲ ಜೀವಂತಿಕೆಯಲ್ಲೂ ಇರುವ ಆತ್ಮದ ಕುರಿತಂತೆ ಅವರಿಗೆ ಅವರದ್ದೇ ಆದ ನಂಬಿಕೆಗಳಿವೆ. ಆ ಆತ್ಮಗಳು ಮುನಿದರೆ ದುರದೃಷ್ಟವನ್ನು ತರಬಹುದು ಅಥವಾ ಕಾಡಬಹುದು ಎಂದು ನಂಬುತ್ತಾರೆ. ತಮ್ಮ ನಂಬಿಕೆಗಳನ್ನು ಅವರು ದೇಹದ ಮೇಲೆ ಹಚ್ಚೆಯನ್ನು ಹಾಕಿಕೊಳ್ಳುವ ಮೂಲಕ ಮತ್ತು ತಮ್ಮ ಹಲ್ಲುಗಳನ್ನು ಹರಿತವಾಗಿ ಮಾಡಿಕೊಳ್ಳುವ ಮೂಲಕ ಪ್ರದರ್ಶಿಸುತ್ತಾರೆ. ಬೇಟೆಯಾಡುವಾಗಲೂ ಮರ ಕಡಿಯುವಾಗಲೂ ಅದರಲ್ಲಿನ ಆತ್ಮಕ್ಕೆ ಕ್ಷಮೆ ಕೇಳುವ ರೂಢಿಯಿರಿಸಿಕೊಂಡಿದ್ದಾರೆ.

ಅವರ ‘ಉಮಾ’ ಹೆಸರಿನ ಮನೆಗಳು ಬಿದಿರಿನ ಕಟ್ಟಿಗೆಗಳನ್ನು ಒಟ್ಟಿಗೆ ಹೆಣೆಯುವ ಮೂಲಕ ಗೋಡೆಗಳು ಹಾಗೂ ಹುಲ್ಲಿನ ಛಾವಣಿಯನ್ನು ಹೊಂದಿವೆ. ನೆಲವನ್ನು ಮರದ ಕೋಲುಗಳ ಆಧಾರದ ಮೇಲೆ ಕೊಂಚ ಮೇಲಕ್ಕೆತ್ತಿ ನಿರ್ಮಿಸಿದ್ದು, ಹಲಗೆಗಳನ್ನು ಹಾಸಿರುತ್ತಾರೆ. ಸದಾ ಕೆಸರುಮಯವಾಗಿರುವ ಮನೆಯ ಕೆಳಗಿನ ಭಾಗವನ್ನು ಹಂದಿಗಳು ಮತ್ತು ಕೋಳಿಗಳನ್ನು ಸಾಕಲು ಬಳಸುವರು. ಒಬ್ಬ ಉಮಾ ಒಡೆಯ ಮೂರರಿಂದ ನಾಲ್ಕು ಕುಟುಂಬಗಳನ್ನು ಹೊಂದಬಹುದು.

ಗಮ್ ಮರದ ತೊಗಟೆಯಿಂದ ಮಾಡಿದ ಸೊಂಟದ ಬಟ್ಟೆಯೇ ಪುರುಷರಿಗೆ ಲಂಗೋಟಿ. ಮೆಂಟವಯ್ ಜನರು ತಮ್ಮ ಕೂದಲು ಮತ್ತು ಕಿವಿಗಳನ್ನು ಹಾರ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಮಹಿಳೆಯರು ಸೊಂಟದ ಸುತ್ತಲೂ ಬಟ್ಟೆಯನ್ನು ಮತ್ತು ಪಾಮ್ ಅಥವಾ ಬಾಳೆ ಎಲೆಗಳಿಂದ ಮಾಡಿದ ಸಣ್ಣ ತೋಳಿಲ್ಲದ ನಡುವಂಗಿಗಳನ್ನು ಧರಿಸುತ್ತಾರೆ. ಇವರು ನಂಬುವ ಸೌಂದರ್ಯದ ಕಾರಣಗಳಿಗಾಗಿ ತಮ್ಮ ಹಲ್ಲುಗಳನ್ನು ಉಳಿಯನ್ನು ಬಳಸಿ ಹರಿತಗೊಳಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವಿಕೆಯನ್ನು ಸೂಜಿ ಮತ್ತು ಮರದಿಂದ ಮಾಡಲಾಗುತ್ತದೆ. ತಲೆಯಿಂದ ಕಾಲಿನವರೆಗೂ ಮೈತುಂಬ ಹಚ್ಚೆಯೇ ಆವರಿಸಿರುತ್ತದೆ.

ಗಂಡಸರು ಕಾಡುಹಂದಿಗಳು, ಜಿಂಕೆ ಮತ್ತು ಸಸ್ತನಿಗಳನ್ನು ಬೇಟೆಯಾಡುತ್ತಾರೆ. ನಾಯಿಗಳನ್ನು ಬೇಟೆಯಾಡುವ ಸಮಯದಲ್ಲಿ ಪ್ರಾಣಿಗಳನ್ನು ಗುರುತಿಸಲು ಬಳಸಲಾಗುತ್ತದೆ. ಮಹಿಳೆಯರು ಮತ್ತು ಮಕ್ಕಳು ಕಾಡುಹಣ್ಣುಗಳನ್ನು ಸಂಗ್ರಹಿಸುತ್ತಾರೆ. ಅವರ ಮುಖ್ಯ ಆಹಾರ ಸಾಗೋ. ತಾಳೆ ಮರದ ಕಾಂಡವನ್ನು ತುರಿದು ಮಾಡಿದ ಹಿಟ್ಟನ್ನು ಕೊಬ್ಬರಿ ತುರಿಯೊಂದಿಗೆ ಮಿಶ್ರಣ ಮಾಡಿ ಬಿದಿರಿನ ಬೊಂಬುಗಳಲ್ಲಿ ತುಂಬಿ ಬೇಯಿಸಿ ತಯಾರಿಸುವ ಆಹಾರವೇ ಸಾಗೋ. ಹಂದಿಗಳು, ನಾಯಿಗಳು, ಕೋತಿಗಳು ಮತ್ತು ಕೆಲವೊಮ್ಮೆ ಕೋಳಿಗಳು ಅವರ ಸಾಕುಪ್ರಾಣಿಗಳು.

## ಪ್ರವಾಸೋದ್ಯಮದ ಭರವಸೆ

ಸ್ವಾತಂತ್ರ್ಯ ಪೂರ್ವ ಯುಗದಲ್ಲಿ, ವಿದೇಶಿ ವಸಾಹತುಶಾಹಿಗಳು, ನಂತರದ ವಸಾಹತುಶಾಹಿ ಕಾಲದಲ್ಲಿ ಮತ್ತು ಇಂಡೋನೇಷ್ಯಾ ಸರ್ಕಾರದ ಪ್ರಭಾವದ ನಡುವೆಯೂ ಮೆಂಟವಯ್ ಸಮುದಾಯ ತಮ್ಮ ಆಚರಣೆ, ರೀತಿ ನೀತಿ, ಜೀವನ ಪದ್ಧತಿ ಉಳಿಸಿಕೊಂಡು ಪ್ರಕೃತಿಯ ಮಕ್ಕಳಂತೆ ಬದುಕಿರುವುದು ಸೋಜಿಗವೇ ಸರಿ. ಬದಲಾಗುತ್ತಿರುವ ಕಾಲಮಾನದಲ್ಲಿ ಅವರು ಇನ್ನೂ ಸಾಂಪ್ರದಾಯಿಕ ಜೀವನಶೈಲಿಯನ್ನು ಮತ್ತು ಪ್ರಕೃತಿಯ ಆರಾಧನೆ ನಡೆಸುತ್ತಿದ್ದಾರೆ. ಜಾಗತೀಕರಣದ ಕಾರಣದಿಂದಾಗಿ ವಿವಿಧ ಅಂಗಡಿಗಳು ಮತ್ತು ತಂತ್ರಜ್ಞಾನವನ್ನು ಬುಡಕಟ್ಟು ಭೂಮಿಗೆತರಲಾಗಿದೆಮತ್ತು ಬುಡಕಟ್ಟಿನದೈನಂದಿನ ಜೀವನವನ್ನು ನಡೆಸುತ್ತಿರುವ ನಿವಾಸಿಗಳೊಂದಿಗೆ ಸಂವಹನ ನಡೆಸಲು ಬಯಸುವವರಿಗೆ ಅವರ ಮುಂದಿನ ಪೀಳಿಗೆಯವರು ಪ್ರವಾಸಗಳನ್ನು ಸಹ ಏರ್ಪಡಿಸುತ್ತಿದ್ದಾರೆ. ಪ್ರವಾಸೋದ್ಯಮ ಬೆಳೆದಂತೆ ಅದು ಹೆಚ್ಚಿನ ಜೀವನೋಪಾಯದ ಅವಕಾಶಗಳನ್ನು ಒದಗಿಸುತ್ತಿದೆ.

ನಮ್ಮಂತಹ ಪ್ರವಾಸಿಗರು ಮೆಂಟವಯ್ ಸಂಸ್ಕೃತಿಯನ್ನು ಅನುಭವಿಸುವುದು ಸದ್ಯಕ್ಕೆ ಸಾಧ್ಯವಿದೆ. ಮೆಂಟವಯ್ ಸಮುದಾಯದ ಈಗಿನ ಯುವಕರಿಗೆ ಪ್ರವಾಸೋದ್ಯಮದ ರೂಪದಲ್ಲಿ ಅವರ ಸಂಸ್ಕೃತಿ ಆದಾಯ ತಂದುಕೊಡುತ್ತಿದೆ.

ಅವರ ಭಾಷೆ ನಮಗೆ, ನಮ್ಮ ಭಾಷೆ ಅವರಿಗೆ ಬರದಿದ್ದರೂ ಭಾವನೆಗಳನ್ನು ಹಂಚಿಕೊಳ್ಳುವುದರಲ್ಲಿ ತೊಡಕಿಲ್ಲವಲ್ಲ. ಹಸನ್ಮುಖಿಯಾಗಿ ಪರಮಾಪ್ತರಂತೆ ಕೈಹಿಡಿದು ತಮ್ಮ ಗುಡಿಸಿಲಿನೊಳಗೆ ಬರಮಾಡಿಕೊಂಡರು. ಅವರ ಅಡುಗೆ ತಯಾರಿಕೆ ಮೊದಲಾದ ನಿತ್ಯ ಕಾಯಕದಲ್ಲಿ ತೊಡಗಿರುವಾಗ ನಾವು ಛಾಯಾಗ್ರಹಣ ಮಾಡಲು ಸಹಕರಿಸುವರು. ದೋಣಿಯಲ್ಲಿ ಸಾಗುವಾಗ, ಕಾಡಿಗೆ ಬೇಟೆಗೆ ಹೋದಾಗ ಅವರೊಂದಿಗೆ ನಾವೂ ಹೋಗಿ ನಿಸರ್ಗದ ಮಕ್ಕಳಾಗಲು ಪ್ರಯತ್ನಿಸಿದೆವು. ಮನೆಯ ಮಧ್ಯದಲ್ಲಿ ಹಚ್ಚಿದ ಕಟ್ಟಿಗೆಯ ಒಲೆಯಲ್ಲಿ ನಾವು ತೆಗೆದುಕೊಂಡು ಹೋದ ಪಾತ್ರೆಗಳಲ್ಲಿ ಅಡುಗೆ ಮಾಡಿಕೊಂಡು ತಿಂದೆವು. ರಾತ್ರಿ ಅವರಂತೆಯೇ ಹಲಗೆಯ ಮೇಲೆ ಮಲಗಿ ನಿದ್ರಿಸಿದೆವು. ಬೆಳಗಿನ ಶೌಚ ಮತ್ತು ಸ್ನಾನಕ್ಕೆ ಮನೆಯ ಬಳಿಯ ನದಿಯನ್ನು ಅವಲಂಬಿಸಿದೆವು. ಅವರ ನೆಮ್ಮದಿಯ ಬದುಕು, ಶಾಂತ ಮನಸ್ಥಿತಿ, ದೈಹಿಕ ಆರೋಗ್ಯ, ಸ್ವಚ್ಛ ವಾತಾವರಣದಲ್ಲಿನ ಜೀವನ, ನಿರ್ಲಿಪ್ತತೆಯನ್ನು ಕಂಡು ಹೊಟ್ಟೆಕಿಚ್ಚಾದರೂ, ಎರಡು ದಿನಗಳಲ್ಲಿ ನಮ್ಮ ಮನಸ್ಸಿನ ಬ್ಯಾಟರಿ ರೀಚಾರ್ಜ್ ಮಾಡಿದ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿದೆವು.